5

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಹಕ್ಕುಚ್ಯುತಿ (ಕೆಆರ್‌ಎಸ್)

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE 3/6/2020

# ಸಭಾಧ್ಯಕ್ಷರ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಕೆಆರ್‌ಎಸ್ ಬೆಂಬಲ

## ವೈದ್ಯಕೀಯ ಪರಿಕರ ಅಕ್ರಮ: ಕಡತ ಪರಿಶೀಲನೆ ತಡೆಗೆ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು




ಕೊರೋನಾ ಹಿನ್ನೆಲೆಯಲ್ಲಿ ವಿವಿಧ ಆಸ್ಪತ್ರೆಗಳಿಗೆ ಹಾಗೂ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ತಡೆಯಾಜ್ಞೆ ನೀಡಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ರಾಜೀನಾಮೆ ನೀಡಬೇಕು ಎಂದು ಕರ್ನಾಟಕ ರಾಷ್ಟ್ರಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾರೆಡ್ಡಿ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭಾಧ್ಯಕ್ಷರ ವಿರುದ್ಧ ಹಕ್ಕುಚ್ಯುತಿ ಮಂಡಿಸಲಿರುವ ಶಾಸಕ ಎಚ್.ಕೆ.ಪಾಟೀಲ್ ಮತ್ತು ಸಮಿತಿಗೆ ಪಕ್ಷವು ನೈತಿಕ ಬೆಂಬಲ ನೀಡಲಿದೆ. ವೈದ್ಯಕೀಯ ಪರಿಕರ ಖರೀದಿಯಲ್ಲಿ ಅಕ್ರಮ ಸಂಬಂಧ ಎಲ್ಲಾ ಕಡತಗಳನ್ನು ರಾಜ್ಯ ಮುಖ್ಯ ಕಾರ್ಯದರ್ಶಿಯವರ ಸುಪರ್ದಿಯಲ್ಲಿಡಬೇಕು. ಸಂಬಂಧಿಸಿದ ಎಲ್ಲಾ ಕಡತಗಳನ್ನು ಟಿಪ್ಪಣಿ ಹಾಳೆ, ದಾಖಲೆ, ಪತ್ರ ವ್ಯವಹಾರಗಳಲ್ಲಿ ಶೀಘ್ರದಲ್ಲಿಯೇ ಆಯಾಯ ಇಲಾಖೆಗಳ ಅಧಿಕೃತ ವೆಬ್‌ಸೈಟ್‌ನಲ್ಲಿ ಸಂಪೂರ್ಣವಾಗಿ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರದ ಕೆಡಿಎಲ್‌ಡಬ್ಲ್ಯೂಎಸ್ ಸಂಸ್ಥೆಯು ವಿಪತ್ತಿನ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ಹಲವು ಅಕ್ರಮ ಎಸಗಿದೆ. ವೈದ್ಯಕೀಯ ಉಪಕರಣಗಳ ಉತ್ಪಾದಕರಿಂದ ಖರೀದಿಸಬೇಕಿದ್ದ ಸಾಮಗ್ರಿಗಳನ್ನು ಕೆಡಿಎಲ್‌ಡಬ್ಲ್ಯೂಎಸ್ ಸಂಸ್ಥೆಯು ಕೃಷಿ ಉತ್ಪನ್ನಗಳ ತಯಾರಿಕೆ ಕಂಪನಿ, ವೆಬ್‌ಸೈಟ್ ಡಿಸೈನ್ ಮಾಡುವಂತಹ ಸಂಶಯಾಸ್ಪದ ಕಂಪನಿಗಳಿಂದ 3 ಕೋಟಿ ರು. ಪಿಪಿಇ ಕಿಟ್‌ಗಳನ್ನು ಖರೀದಿಸಿದೆ. ಕೊರೋನಾ ಸೋಂಕಿಗೆ ಚಿಕಿತ್ಸೆಗೆ ಅಗತ್ಯವಾದ ವೆಂಟಿಲೇಟರ್‌ಗಳನ್ನು ಬೆಹಲ್ ಸಂಸ್ಥೆಯೊಂದರಿಂದ 3.88 ಕೋಟಿ ರು. ಮೊತ್ತ ಪಾವತಿಸಿ ಖರೀದಿ ಮಾಡಲಾಗಿದೆ. 2007ರಲ್ಲಿಯೇ ಆ ಸಂಸ್ಥೆಯೂ ಇವುಗಳನ್ನು ಖರೀದಿಸಿದೆ. 13 ವರ್ಷ ಹಳೆಯದಾದ ಈ ವೆಂಟಿಲೇಟರ್‌ಗಳನ್ನು ಹೊಸ ಉಪಕರಣಗಳ ಬೆಲೆಗೆ ಖರೀದಿ ಮಾಡಲಾಗಿದೆ ಎಂದು ಆಪಾದಿಸಿದರು.

ಸಮಿತಿಯ ಅಧ್ಯಕ್ಷರಾದ ಶಾಸಕ ಎಚ್.ಕೆ.ಪಾಟೀಲ್ ಅವರು ಸಭಾಧ್ಯಕ್ಷರ ವಿರುದ್ಧವೇ ಹಕ್ಕುಚ್ಯುತಿ ಮಂಡಿಸಲಿದ್ದೇವೆ ಎಂದು ಹೇಳಿರುವುದನ್ನು ಪಕ್ಷವು ಸ್ವಾಗತಿಸುತ್ತದೆ. ಯಾವುದೇ ಕಾರಣಕ್ಕೂ ಈ ನಿಲುವಿನಿಂದ ಹಿಂದೆ ಸರಿಯಬಾರದು. ಸದನದ ಸದಸ್ಯರ ಇಂತಹ ಅವಿಶ್ವಾಸದ ಹೇಳಿಕೆಗಳು ಸಭಾಧ್ಯಕ್ಷರ ಹುದ್ದೆಯ ಘನತೆ ಯಾವ ಮಟ್ಟಕ್ಕೆ ಇಳಿದಿದೆ ಎನ್ನುವುದನ್ನೂ ಸೂಚಿಸುತ್ತಿದೆ. ಇಂತಹ ಸಾಂವಿಧಾನಿಕ ಬಿಕ್ಕಟ್ಟನ್ನು ಅನವಶ್ಯಕವಾಗಿ ಸೃಷ್ಟಿಸಿರುವ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆಯವರು ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಹೇಳಿದ ಅವರು, ಈ ವಿಚಾರವನ್ನು ರಾಜ್ಯಪಾಲರ ಗಮನಕ್ಕೆ ತಲುಪಲಿದ್ದು, ತಕ್ಷಣ ಸಭಾಧ್ಯಕ್ಷರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.